

# ಚೀನಾದ ಅದ್ಭುತ ಪಿಂಗಾಣಿ ಗೋಪುರ!



ಪಿಂಗಾಣಿ ಮೇಲೆ ವೈವಿಧ್ಯಮಯ ಕಲೆಗಾರಿಕೆ ತಯಾರಿಸುವುದರಲ್ಲಿ ಚೀನಾದ ಮಂದಿ ನಿಸ್ಸೀಮರು. ವಿಶ್ವದ ಮಧ್ಯಕಾಲೀನ ಯುಗದ ಏಳು ಅದ್ಭುತಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟ ಪಿಂಗಾಣಿಯಿಂದ ನಿರ್ಮಾಣವಾದ ಚೀನಾ ದೇಶದ ಗೋಪುರವು ಒಮ್ಮೆ ಪೂರ್ಣವಾಗಿ ನಿರ್ನಾಮವಾಗಿತ್ತು. ಈಗ ಅದು ಹಿಂದಿನ ಹಾಗೆಯೇ ಮರು ನಿರ್ಮಾಣವಾಗಿ ಪ್ರವಾಸಿಗರನ್ನು ಸೆಳೆಯುತ್ತಿದೆ.

ಜಿಯಾಂಗ್ಸ್ ಪ್ರಾಂತದ ರಾಜಧಾನಿ ನಾನ್ಜಿಂಗ್‌ನಲ್ಲಿರುವ ಈ ಗೋಪುರದ ತಳಪಾಯದ ಭದ್ರವಾದ ಪೀಠವೇ 97 ಅಡಿ ಎತ್ತರವಿದೆ. ಅಷ್ಟಭುಜಾಕೃತಿಯ ಗೋಪುರ 260 ಅಡಿ ಎತ್ತರವಾಗಿದ್ದು ಒಂಭತ್ತು ಅಂತಸ್ತುಗಳನ್ನು ಹೊಂದಿದೆ. ಒಳಗೆ ಸುರುಳಿಯಾಕಾರದ 184 ಮೆಟ್ಟಿಲುಗಳಿವೆ. ಮೇಲ್ಛಾವಣಿಯಲ್ಲಿ ಅನಾನಸಿನ ಆಕೃತಿಯ ಬಂಗಾರದ ಕಳಶವೂ ಮಿಂಚುತ್ತಿದೆ. ಹೊಸ ಗೋಪುರಕ್ಕೆ ದೃಢವಾದ ಉಕ್ಕು ಮತ್ತು ಗಾಜು ಕೂಡ ಬಳಕೆಯಾಗಿದೆ.

ಹದಿನೈದನೆಯ ಶತಮಾನದಲ್ಲಿ ಮಿಂಗ್ ರಾಜವಂಶದ ಚಕ್ರವರ್ತಿ ಯಾಂಗಟ್ (ಆಳ್ವಿಕೆಯ ಕಾಲ 14011424) ಕಿನ್ಜುಯಿ ನದಿ ದಂಡೆಯಲ್ಲಿ ತನ್ನ ಮೃತ ತಾಯಿಯ ಸ್ಮರಣಾರ್ಥ ನಿರ್ಮಿಸಿದ ಗೋಪುರವು ಪೂರ್ಣವಾಗಿ ಪಿಂಗಾಣಿಯಿಂದಲೇ ಸೃಷ್ಟಿಯಾಗಿತ್ತು. ಬವೊನ್ ಎಂಬ ದೇವಾಲಯದ ಬುಡದಲ್ಲಿ ಇದನ್ನು ನಿರ್ಮಿಸಲು ಕುಶಲಕರ್ಮಿಗಳಿಗೆ ಹದಿನೇಳು ವರ್ಷ ಬೇಕಾಯಿತಂತೆ. ಇದಕ್ಕೆ ಬಿಳಿ ವರ್ಣದ ಪಿಂಗಾಣಿಯ ಇಟ್ಟಿಗೆಗಳನ್ನೇ ಬಳಸಲಾಯಿತು. ದೊಡ್ಡ ಇಟ್ಟಿಗೆಗಳ ತೂಕ 330 ಪೌಂಡುಗಳಷ್ಟಿದ್ದು 20 ಇಂಚು ದಪ್ಪವಾಗಿದ್ದವು. ಗೋಪುರದ ಪಕ್ಕಗಳಲ್ಲಿ ಕಂದು, ಹಳದಿ, ಹಸುರು ಮತ್ತು ಬಿಳಿ ವರ್ಣದ ಪಿಂಗಾಣಿಗಳನ್ನು ಜೋಡಿಸಲಾಗಿತ್ತು. ಅವುಗಳ ಮೇಲೆ ಬಗೆ ಬಗೆಯ ಪ್ರಾಣಿಗಳು, ಪವಿತ್ರವಾದ ಬಿದಿರು, ಹೂವುಗಳು, ಭೂ ದೃಶ್ಯಗಳು, ಬೌದ್ಧ ಪುರಾಣದ ನೋಟಗಳನ್ನು ವರ್ಣಮಯವಾಗಿ ಚಿತ್ರಿಸಲಾಗಿದೆ.

ಗೋಪುರ ನಿರ್ಮಿಸಲು 2010ರಲ್ಲಿ ಚೀನಾದ ಉದ್ಯಮಿ ವಾಂಗ್ ಜಿಯಾನ್ಲಿನ್ 156 ದಶಲಕ್ಷ ಅಮೆರಿಕನ್ ಡಾಲರುಗಳ ದೇಣಿಗೆ ನೀಡಿದ. ಗೋಪುರದ ನಿರ್ಮಾಣ ಪೂರ್ಣಗೊಂಡು ಸಾರ್ವಜನಿಕರ ವೀಕ್ಷಣೆಗೆ ತೆರೆದುಕೊಂಡದ್ದು 2015ರ ಡಿಸೆಂಬರ್ ತಿಂಗಳಲ್ಲಿ. ಪಕ್ಕದಲ್ಲೇ ದೇವಾಲಯವೂ ಇದೆ.

■ ಪ. ರಾಮಕೃಷ್ಣ ಶಾಸ್ತ್ರಿ